1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 733 /2019 ಪ್ರಾಸಾ (2)

ದಿನಾಂಕಃ **14-05-2026** ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನನಗೆ ಓದಲು ಬರೆಯಲು ಬರುತ್ತದೆ. ಈ ಪ್ರಕರಣದ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಆದರೆ ಅವರ ಹೆಸರು ಗೊತ್ತಿಲ್ಲ. ನನ್ನ ತಂಗಿ ಮತ್ತು 1 ನೇ ಆರೋಪಿ ಬೇರೆ ಬೇರೆಯಾಗಿ ಈಗ 15 ವರ್ಷಗಳು ಕಳೆದಿರುತ್ತವೆ. 1 ನೇಆರೋಪಿ 2 ನೇ ಮದುವೆ ಆದ ಕಾರಣಕ್ಕೆ ರಾಜಿ ಪಂಚಾಯತಿ ಮಾಡಿ ಚಾಸಾ-1 ರವರಿಗೆ ಅವಳ ಉಪಜೀವನಕ್ಕೆ ಒಂದು ಮನೆ ಮತ್ತು 4 ಎಕರೆ ಜಮೀನನ್ನು ಅವಳ ಹೆಸರಿಗೆ ವರ್ಗಾಯಿಸಿರುತ್ತಾರೆ. ಸದರಿ ಜಮೀನು ಮತ್ತು ಮನೆ ನನ್ನ ಸಹೋದರಿ ಚಾಸಾ-1 ರವರ ಹೆಸರಿನಲ್ಲಿದೆ. ಸದರಿ ಜಮೀನ ನ್ಯಾಯಾಲಯದ ಡಿಕ್ರಿ ಪ್ರಕಾರ ಚಾಸಾ-1 ರವರಿಗೆ ನೀಡಲಾಗಿರುತ್ತದೆ. ಅದರ ವರ್ಷ ನನಗೆ ನೆನಪಿರುವುದಿಲ್ಲ. ದಿನಾಂಕಃ 4-5-2019 ರಂದು ಘಟನೆ ನಡೆದಿಲ್ಲ ಮತ್ತು ಚಾಸಾ-1 ರವರು ಹೇಳಿದ ಮೇರೆಗೆ ನಾನು ಸುಳ್ಳು ಸಾಕ್ಷ ನುಡಿಯತ್ತಿದ್ದೆನಂದರೆ ಸರಿಯಲ್ಲ. 1 ನೇಆರೋಪಿ ಮತ್ತು ಚಾಸಾ-1 ರವರು ಮದುವೆ ಆದಾಗ ಚೆನ್ನಾಗಿಯೇ ಇದ್ದರು. ಮದುವೆ ಆಗಿ 2 ವರ್ಷಕ್ಕೆ ಮಗು ಜನಿಸಿರುತ್ತದೆ. ಚಾಸಾ-1 ರವರಿಗೆ ಜನಿಸಿದ ಮಗಳ ಶಾಲೆಯ ಖರ್ಚು ಮತ್ತು ಇನ್ನಿತರ ಖರ್ಚನ್ನು 1 ನೇ ಆರೋಪಿ ನೋಡಿಕೊಂಡಿರುತ್ತಾನೆ ಅಂದರೆ ಸರಿಯಲ್ಲ.

2. ಚಾಸಾ-1 ರವರೊಂದಿಗೆ 1 ನೇಆರೋಪಿ ಜಗಳ ಮಾಡಿ ಚಾಸಾ-1 ರವರಿಗೆ ಹೊಡೆದಿದ್ದಕ್ಕೆ ದಿಃ 4-5-2019 ರಂದು ದೂರು ದಾಖಲಿಸಲಾಗಿರುತ್ತದೆ. ಚಾಸಾ-1 ಮತ್ತು 1 ನೇ ಆರೋಪಿ ಬೇರೆಗ ಬೇರೆ ಅಗಿ 15 ವರ್ಷಗಳಾಗಿದ್ದು ಈ ಮದ್ಯ ಆರೋಪಿ ಯಾವತ್ತೂ ಚಾಸಾ-1 ರವರ ಮನೆಗೆ ಹೋಗಿಲ್ಲ ಮತ್ತು ಅವರಿಗೆ ಯಾವುದೇ ಹೊಡಿ ಬಡಿ ಮಾಡಿಲ್ಲ ಅಂದರೆ ಸರಿಯಲ್ಲ. 1 ನೇ ಆರೋಪಿಯ ಆಸ್ತಿ ಕಬಳಿಸಲು ಚಾಸಾ-1 ರವರು ದೂರು ದಾಖಲಿಸಿದ್ದಾರೆ ಅಂದರೆ ಸರಿಯಲ್ಲ. ಚಾಸಾ-1 ಮತು ಆರೋಪಿ -2 ರಿಂದ 4 ರವರ ಮದ್ಯ ಯಾವುದೇ ಗಲಾಟೆಆಗಿಲ್ಲ ಅಂದರೆ ಸರಿಯಲ್ಲ. ಚಾಸಾ-1 ರವರಿಗೆ ನೀಡಿದ ಜಮೀನು ಮತ್ತು ಮನೆಗಳು ಇದುವರೆಗೂ 1 ನೇ ಅರೋಪಿಯ ತಂದೆ ಹೆಸರಿನಲ್ಲಿವೆ. ಚಾಸಾ-1 ರವರಿಗೆ 4 ಎಕರೆ ಜಮೀನು ಮತ್ತು ಮನೆಯನ್ನು ಉಪಭೋಗಕ್ಕೆ ನೀಡಿದ್ದಾರೆ ಅಂದರೆ ಸರಿ. ಸದರಿ 4 ಎಕರೆ ಜಮೀನು ಮತು ಮನೆಯನ್ನು ಚಾಸಾ-1 ರವರ ಹೆಸರಿಗೆ ವರ್ಗಾಯಿಸಲು ಒಂದು ಬಾರಿ ಪಂಚಾಯತಿ ಆಗಿದೆ. 1 ರಿಂದ 4 ನೇ ಆರೋಪಿತರು ತಮ್ಮ ಕುಟುಂಬದ ಆಸ್ತಿಯಲ್ಲಿ ಪಾಲು ಮಾಡಿಕೊಂಡ ನಂತರ 1 ನೇ ಆರೋಪಿಗೆ ಬರುವ ಪಾಲಿನಲ್ಲಿ ಅರ್ಧಭಾಗ ಚಾಸಾ-1 ರವರಿಗೆ ಕೊಡುತ್ತೆವೆ ಎಂದು ಒಪ್ಪಿದ್ದರು ಅಂದರೆ ಸರಿ, ಚಾಸಾ-1 ರವರಿಗೆ 4 ಎಕರೆ ಜವೀನು ಮುತ್ತ ಮನೆ ಕೊಡಲು ಆಗವುದಿಲ್ಲ ಎಂದು ಹೇಳಿದ್ದರು ಅಂದರೆ ಸರಿ. 1 ರಿಂದ 4 ನೇ ಆರೋಪಿತರಿಗೆ 4 ಎಕರೆ ಜಮೀನು ಮತ್ತು ಒಂದು ಮನೆ ಚಾಸಾ-1 ರವರಿಗೆ ಕೊಡಬೇಕು ಎಂದು ಕೇಳಿದ್ದಕ್ಕೆ ಆರೋಪಿತರು ನಿರಾಕರಿಸಿದ್ದಕ್ಕೆ ಈ ಪ್ರಕರಣ ದಾಖಲು ಆಗಿದೆ ಅಂದರೆ ಸರಿಯಲ್ಲ. ಆರೋಪಿತರು ಮತ್ತು ಚಾಸಾ-1 ರವರ ಮದ್ಯ ಜಮೀನು ವಿಷಯಕ್ಕೆ ಗಲಾಟೆ ಆಗಿದೆ ಅಂದರೆ

ಸರಿಯಲ್ಲ ಮುಸುರೆ ತಿಕ್ಕುವ ಉದ್ದೇಶಕ್ಕೆ ಗಲಾಟೆ ಆಗಿರುತ್ತದೆ. ಚಾಸಾ-1 ರವರ ಮಗಳ ಮದುವೆ ಆಗಿರುತ್ತದೆ. ಸದರಿ ಮದುವೆ ಖರ್ಚನ್ನು 1ನೇಆರೋಪಿ ನಿಭಾಯಿಸಿರುತ್ತಾರೆ ಅಂದರೆ ಸರಿ. 1ನೇಆರೋಪಿ ತನ್ನ ಮಗಳ ಮದುವೆ ಖರ್ಚನ್ನು ನಿಭಾಯಿಸಿರುತ್ತಾರೆ.

3. ನಾನು ಚಾಸಾ-1 ರವರನ್ನು ಆಸ್ಪತ್ರೆಗೆ ಗಲಾಟೆ ಆದ ದಿನ ಕರೆದುಕೊಂಡು ಹೋಗಿಲ್ಲ ಅಂದರೆ ಸರಿಯಲ್ಲ. ನಿಪಿ-1ನ್ನು ನಾನೇ ಬರೆದಿರುತ್ತೇನೆ. ನಿಪಿ-1 ರಲ್ಲಿ ಬರೆದ ಯಾವುದೇ ಘಟನೆ ನಡೆದಿಲ್ಲ ಆರೋಪಿತರ ವಿರುದ್ಧ ಸುಳು ದೂರು ದಾಖಲಿಸಲು ನಿಪಿ-1 ರ ಕತೆಯನ್ನು ಸೃಷ್ಟಿಸಿದ್ದೇವೆಅಂದರೆ ಸರಿಯಲ್ಲ. ಈ ಘಟನೆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಆದರೂ ಸಹ ನಾನು ಚಾಸಾ-1 ರವರ ಹೇಳಿಕೆ ಮೇರೆಗೆ ಸುಳ್ಳು ದೂರು ಬರೆದು ಸುಳ್ಳು ಸಾಕ್ಷ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಲು ಚಾಸಾ-1 ರವರು ಸುಳ್ಳು ದೂರು ನೀಡಿದ್ದಾರೆ ಅಂದರೆ ಸರಿಯಲ್ಲ. ದಿಃ 4-5-2019 ರಂದು ಯಾವುದೇ ಘಟನೆ ನಡೆದಿಲ್ಲ ಮತ್ತು ಚಾಸಾ-1 ರವರು ಸುಳು ಘಟನೆ ಬಗೆ ನನಗೆ ಮಾಹಿತಿ ನೀಡಿದ್ದು ನಾನು ಸುಳ್ಳು ಸಾಕ್ಷ ಹೇಳುತ್ತಿದೆನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

**1ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.**